ಪೋಸ್ಟಿಗೆ ಹಾಕಿಬಿಟ್ಟಿದ್ದೆ. ಎಲ್ಲ ಬರೆದು ಕೆಳಗೆ ನೊಂದ ಗ್ರಾಮಸ್ಥ, ಹರವೆ ಅಂತ ಊರಿನ ಹೆಸರೂ ಹಾಕಿಬಿಟ್ಟಿದ್ದೆ. ಅಲ್ಲಿಗೆ ಕಥೆ ಶುರುವಾಗಿತ್ತು.

ಇದರಲ್ಲಿ ನಿಜವಾಗಿ ಯಾರು ಯಾವ ಪ್ರಮಾಣದಲ್ಲಿ ಈ ಅನಾಮಧೇಯ ಪತ್ರಕೆ ಸ್ಪಂದಿಸಿದರೋ ಅಂತೂ ಮುಖ್ಯ ಪೇಪರುಗಳಲ್ಲಿ ಸುದ್ದಿಯಾಗಿದ್ದು ಮಾತ್ರ ತುಂಬ ದೊಡ್ಡದಾಗಿಯೇ. ನನ್ನ ಪತ್ರದ ಮಹತ್ವದ ಕುರಿತು ಸುದ್ದಿಯ ನಡುವೆ ದೊಡ್ಡಕ್ಷರಗಳಲ್ಲಿ ಬರೆಯಲ್ಪಟ್ಟಿತ್ತು. ಊರಿನಲ್ಲಿ ರಾತ್ರೋ ರಾತ್ರಿ ರೇಡ್ ಆಗಿತ್ತು, ಮುಖ್ಯ ಮುಖ್ಯ ಕುಳಗಳ ಬಂಧನವಾಗಿತ್ತು. ಕಳ್ಳ ನಾಟಾ, ಗಾಂಜಾ, ಕಾಡುಬೇಟೆ, ಕಳ್ಳಭಟ್ಟಿ ಒಂದೇ ಎರಡೇ? ಈ ಒಂದು ಅನಾಮಧೇಯ ಪತ್ರವನ್ನಿಟ್ಟುಕೊಂಡು ಈ ಪರಿ ರೇಡ್ ಮಾಡ್ತಾರಾ? ನನ್ನ ಮನಸು ಖುಷಿಯಿಂದ ಕುಣಿಯಿತು. ಅಂತೂ ಎಷ್ಟು ದೊಡ್ಡ ಗಂಡಾಂತರದಿಂದ ನಮ್ಮ ಮಾಡುಬೆಟ್ಟವನ್ನು ಪಾರು ಮಾಡಿದ್ದೇನೆ. ಇದೆಲ್ಲ ಯಾವತ್ತೋ ಮಾಡಿರಬೇಕಿತ್ತು. ಆವಾಗ ಇಷ್ಟು ಬುದ್ಧಿ ಇದ್ದರಲ್ಲ! ನಾನು ಒಳಗೊಳಗೇ ನನ್ನನ್ನು ಬೈದುಕೊಂಡಿದ್ದೆ. ಕ್ಲಾಸಿನ ಉಳಿದ ಗೆಳೆಯರಿಗೆ ಇದನ್ನು ತೋರಿಸಿ ಸಂತೋಷ ಹಂಚಿಕೊಳ್ಳಬೇಕೆಂದು ಹೊರಟಾಗಲೇ ಮೊದಲಬಾರಿಗೆ ಹೊಳೆದಿದ್ದು, ಇದು ನನಗೆ ಬೇಡಾಗಿತ್ತು ಎಂದು. ಅದಾಗಲೇ ಕೆಲ ಹುಡುಗರು ತಮ್ಮೊಳಗೆ ಮಾತಾಡಿಕೊಳ್ತಾ ಇದ್ದರು, ‘ಯಾವನಪ್ಪ ಈ ಕೆಲಸ ಮಾಡಿದೋನು, ಗೊತ್ತಾದರೆ ಬಿಡ್ತಾರ, ಸರೀಗೆ ಬೀಳುತ್ತೆ ಮಾತ್ರ’. ಅವರ ಮಾತು ಕೇಳಿ ನನ್ನ ಗಂಟಲೊಣಗಿತ್ತು. ಸದ್ದು ಮಾಡದೆ ಸರಿದು ಹೋಗಿದ್ದೆ. ಒಳಗೆ ನವೆಯುತ್ತಿದ್ದ ಭಯಕ್ಕೆ ಒಂದು ಬಿಡುಗಡೆ ಬೇಕಿತ್ತು. ಬಾಪುಟ್ಟಿ ಬಂದರೆ ಸಾಕೆಂದು ಅವನಿಗಾಗಿ ಹುಚ್ಚನಂತೆ ಕಾಯತೊಡಗಿದ್ದೆ. ವಾರ ಒಂದು, ಎರಡು, ಮೂರು... ಉಹೂಂ ಬಾಪುಟ್ಟಿ ಬಂದಿರಲಿಲ್ಲ. ನಾನೇ ಬರೆದದ್ದೆಂದು ಗೊತ್ತಾಯಿತಾ, ಒಂದುವೇಳೆ ಅಪ್ಪ ಅಮ್ಮ ಬಾಪುಟ್ಟಿಯನ್ನೆಲ್ಲ ವಿಚಾರಿಸ್ತಾ ಇದ್ದಾರ? ನನ್ನೊಳಗಿನ ಭಯ ಬೆಂಕಿಯಾಗಿ ನನಗೆ ಸಣ್ಣಗೆ ಜ್ವರ ಬರತೊಡಗಿತ್ತು. ಆಗ ಬಂದಿದ್ದ ಅಪ್ಪ.

ಅಪ್ಪನ ಮುಖ ಇಳಿದಿತ್ತು. ಕಣ್ಣುಗಳು ಕೆಂಪಗೆ ಉರಿಯುತ್ತಿದ್ದವು. ನನ್ನ ಮನಸ್ಸು ಕೇಡು ಶಂಕಿಸಿತ್ತು. ಹೌದು ಇದು ಅದೇ, ಅಪ್ಪನಿಗೆ ಇದು ನಾನೇ ಅಂತ ಗೊತ್ತಾಗಿದೆ. ಭಯದಿಂದ ನನ್ನ ಮೈ ಕಂಡೂಕಾಣದಂತೆ ಕಂಪಿಸತೊಡಗಿತ್ತು. ಆದರೆ ಅಪ್ಪ ಹೇಳಿದ ಮಾತು! ಅಪ್ಪ ಹೇಳಿದ್ದು ಕೇಳಿ ನನ್ನ ಕಂಪಿತ ದೇಹ ಮರಗಟ್ಟಿ ಎಲುಬಿನಾಳದಲ್ಲಿ ಕ್ರೂರ ಚಳಿ ಟಿಸಿಲೊಡೆದು ಹಾದು ಜೀವ ಹಿಂಡಿದಂತಹ ನೋವಾಗಿತ್ತು. ಊರು ನಮ್ಮ ಘನ ಊರು ಅಪರಾಧಿಯನ್ನು ಹಿಡಿದುಹಾಕಿತ್ತು. ನನ್ನ ಪ್ರಿಯ ಗೆಳೆಯ ಬಾಪುಟ್ಟಿಯ ಕೈಗಳಿಗೆ ನಾನು ಬರೆದ ಬರಹ ಎರವಾಗಿತ್ತು. “ಅಪ್ಪ ಬಾಪುಟ್ಟಿ, ಬಾಪುಟ್ಟಿ ಹೇಗೆ?” ನಾನು ನಿಜವನ್ನು ಹೊರಬಿಡಲಾರದೆ ಭಯದಿಂದ ತೊದಲಿದ್ದೆ. “ಎಲ್ಲ ಆ ಬಡ್ಡಿಮಗ ಉಣ್ಣಿಯ ಕೆಲಸ. ಅವನು ಬರೆಸಿ ಹಾಕಿದ್ದು ಅಂತ ಮೊದಲು ಊರಲ್ಲಿ ಗುಲ್ಲಾಯಿತು. ಅವನೇ ಬರೆಸಿದ್ದು, ಅದು ಬೇರೆ ಮಾತು. ಸರಿ ಅವನನ್ನು ವಿಚಾರಿಸಲೆಂದು ಊರಲ್ಲಿ ಹುಡುಕತೊಡಗಿದ್ದಾರೆ. ಅವನೆಲ್ಲಿ ಅವಿತನೋ ಬಡ್ಡಿಮಗ ಕಡೆಗೂ ಸಿಗಲಿಲ್ಲ. ಈ ನಡುವೆ ಈ ಇವನಿಗೇನಾಯ್ತೋ ಹಾಳಾದವನು, ತಾನೇ ಹೋಗಿ ಧಣಿಗಳ ಬಳಿ ಹೇಳಿದ್ದಾನೆ, ‘ಮೊದಲಾಳಿ, ಅದು ನನ್ನ ಕೆಲಸ, ನಾನೇ ಬರೆದಿದ್ದು, ತಿಳಿಯದೆ ಮಾಡಿದೆ. ಉಣ್ಣಿಯನ್ನ ಬಿಟ್ಟುಬಿಡಿ ಅವನದೇನೂ ತಪ್ಪಿಲ್ಲ” ಅಂತ. ಎಷ್ಟು ಧೈರ್ಯ ಇರಬೇಕು, ಸುಳ್ಳು ಬೊಗಳೋದಿಕ್ಕೆ ಈ ನಾಯಿಗೆ? ಅವರು ಕೇಳಬೇಕಾ? ಮೊದಲೇ ಕುದ್ದು ಮರಳುತ್ತಿದ್ದರು. ಇನ್ನೊಂದು ಮಾತೂ ಆಡದೆ, ‘ಮಗನೆ ಜನ್ಮಕ್ಕೆ ನೆನೆಸಿಕೊಂಡು ಸಾಯಬೇಕು’ ಅಂತ ಸರೀಗೆ ಹೊಡೆದು ಕೈ ಮೇಲೆ ಜೀಪು ಹತ್ತಿಸಿ ಹೋಗಿದ್ದಾರೆ. ದುಷ್ಟರು...” ನಾನು ಪ್ರಜ್ಞೆ ತಪ್ಪಿ ಬಿದ್ದೆನೋ ಗೊತ್ತಿಲ್ಲ. ಅಂತೂ ಮೈ ಮೇಲೆ ಎಚ್ಚರವೇ ಇಲ್ಲದವನಂತೆ ಹೊರಟು ಅಪ್ಪನೊಂದಿಗೆ ಮನೆ ಸೇರಿದ್ದೆ. ನನ್ನ ಹುಚ್ಚುತನಕ್ಕೆ ಬಲಿಯಾದ ನನ್ನ ಬಾಪುಟ್ಟಿಯನ್ನು ಹೇಗೆ ತಾನೇ ನೋಡಬಲ್ಲೆನೆಂಬ ಭಯಕ್ಕೆ ನನಗೆ ಜ್ವರ